# ಇಂಗ್ಲೆಂಡಿಗನಿಗೆ ಸುಜಲಾಂ ಈರೋಡಿನ ಕನಸು

ಪುರಾಣದ ಶಿವ ತನ್ನ ಜಟೆಯಿಂದ ಗಂಗೆಯನ್ನು ಇಳಿಗಿಳಿಸಿದ. ಅದೇ ಗಂಗೆಯನ್ನು ಈ ಕಾಲದ ಶಿವಕುಮಾರ್ 'ಇಂಗುಗುಂಡಿ'ಗಳಿಗೆ ಇಳಿಸುತ್ತಿದ್ದಾರೆ. ಈರೋಡಿನ ಅನೇಕ ಭಾಗಗಳಲ್ಲಿ ಅವರ ನೀರಮಾದರಿಗಳು ಸಾಕಾರಗೊಂಡಿವೆ. ವೃತ್ತಿಕಾರಣ ಇಂಗ್ಲೆಂಡ್‌ನಲ್ಲಿ ನೆಲೆಸಿದ್ದರೂ ಶಿವಕುಮಾರರ ಮನಸೆಲ್ಲ ಈರೋಡಿನಲ್ಲೇ! ಈ 'ಗಂಗಾಧರ'ನಿಗೆ ಬೆಂಗಳೂರಿನೊಂದಿಗೂ ನಂಟಿದೆ.

■ ಶ್ರೀ ಪಡ್ರೆ



ಮಳೆಕೊಯ್ಲಿನಿಂದ ಜಲಮಟ್ಟ ಏರಿಸಿ ಬಾವಿನೀರೇ ಕುಡಿಯುತ್ತಿರುವ ಈರೋಡಿನ ಕದಿರೇಶನ್ ಅವರ ಬಾವಿ

ಇಂಗ್ಲೆಂಡಿನ ಯಶಸ್ವೀ ಬಿಸಿನೆಸ್‌ಮ್ಯಾನ್. ಹರೆಯದಲ್ಲಿ ಇನ್ನೂ ಎಳೆಯ – 47. ಪ್ರತಿವರ್ಷ ತಪ್ಪದೆ ಮೂರು ತಿಂಗಳ ಕಾಲ ಹುಟ್ಟೂರು ಈರೋಡಿಗೆ. ಊಟಕ್ಕೆ ಇಂಗ್ಲೆಂಡಿನಲ್ಲಿ ವೃತ್ತಿ; ಮನಸ್ಸಂತೋಷಕ್ಕೆ ಇಲ್ಲಿನ ಸಾಮಾಜಿಕ ಕೆಲಸ. ಇದು ಶಿವಕುಮಾರ್ ಕೆ. ಅವರ ಬದುಕಿನ ರೀತಿ.

ಕಳೆದ ತಿಂಗಳು ಶಿವಕುಮಾರ್ ಹಲವು ಬಾರಿ ಈರೋಡಿನ ಎಸ್.ವಿ.ಎನ್. ಸ್ಕೂಲಿಗೆ ಹೋಗಿದ್ದರು. 'ಮೂರು ವರ್ಷ ಹಿಂದಿನ ಸಾಗರ್ ಸ್ಕೂಲಿನದು ನನ್ನ ಮೈಲಿಗಲ್ಲು ಕೆಲಸಗಳಲ್ಲೊಂದು. ಅನಂತರದ್ದು ಇದು' ಎಂದು ಉದ್ಗರಿಸುತ್ತಾರೆ ಅವರು.

ಕೊಂಗಂಪಾಳಯಂನ 'ಎಸ್.ವಿ.ಎನ್. ಮೆಟ್ರಿಕ್ಯುಲೇಶನ್ ಹೈಯರ್ ಸೆಕೆಂಡರಿ ಸ್ಕೂಲ್' ಪ್ರತಿಷ್ಠಿತ ವಿದ್ಯಾಸಂಸ್ಥೆ. ಐದೆಕರೆ ಕ್ಯಾಂಪಸ್ಸು. ಇಲ್ಲಿ ಒಂದು ಬಾವಿ ಮತ್ತು ನಾಲ್ಕು ಕೊಳವೆಬಾವಿಗಳಿವೆ. ದಿನಕ್ಕೆ ಇವರಿಗೆ ಅರ್ಧ ಲಕ್ಷ ಲೀಟರ್ ಬೇಕು. ಇಲ್ಲಿ ಐದಾರು ವರ್ಷ ಹಿಂದಿನವರೆಗೂ ನೀರಿನ ಚಿಂತೆಯೇ ಇರಲಿಲ್ಲ.

ನೀರಿನ ಪಾತಳಿ ಇಳಿದಿಳಿದು ದೂರದಿಂದ ನೀರು ತರಬೇಕಾಯಿತು. ವರ್ಷಾರ್ಧವೂ ನೀರು ತರಬೇಕಾದಾಗ ಶಾಲೆಯೇ ಟ್ಯಾಂಕರ್ ಲಾರಿ ಖರೀದಿಸಿತು. ಈಗ ದಿನಕ್ಕೆ ನಾಲ್ಕು ಟ್ಯಾಂಕರು ನೀರು. ವರ್ಷಕ್ಕೆ ಐದಾರು ಲಕ್ಷ ರೂ. ವೆಚ್ಚ.

ಶಾಲಾ ಆಡಳಿತ ಈಚೆಗೆ ಶಿವಕುಮಾರರನ್ನು ಸಂಪರ್ಕಿಸಿತು. ಅವರು ಬಂದು ಸ್ಥಳಸಮೀಕ್ಷೆ ನಡೆಸಿದರು. ಸುರಿದ ಮಳೆಯೆಲ್ಲಾ ಕೊನೆಗೆ ಒಂದೆಕರೆ ಜಾಗ ಸೇರುತ್ತಿತ್ತು. ಅಲ್ಲಿಂದ ನೇರ ಚರಂಡಿಗೆ. ಶಾಲೆಯ ಹೆಚ್ಚಿನ ಜಲಮೂಲಗಳೂ ಈ ಜಾಗದಲ್ಲೇ ಇವೆ.

## ಝೀರೋ ರನ್-ಆಫ್

ಒಂದಿಷ್ಟೂ ಮಳೆನೀರು ಹೊರಬಿಡದಿರುವುದೇ 'ಝೀರೋ ರನ್–ಆಫ್.' ಶಿವಕುಮಾರ್ ಈ ಶಾಲೆಯಲ್ಲಿಯೂ ಅದೇ ಸ್ಥಿತಿ



ಶಿವಕುಮಾರ್ ಕೆ.